# ಸುರಪುರ ತಾಲ್ಲೂಕಿನ ಬಸವ ಪೂರ್ವಯುಗದ ವಚನಕಾರರು

ಎಂ.ಎಸ್. ಮಾಗಣಗೇರಿ*

DOI: https://doi.org/10.5281/zenodo.19501410

**ABSTRACT**

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕು ವಚನ ಸಾಹಿತ್ಯಕ್ಕೆ, ವಿಶೇಷವಾಗಿ ಬಸವಪೂರ್ವ ಯುಗದ ಶರಣರ ಕೊಡುಗೆಯಿಂದಾಗಿ ಅತ್ಯಂತ ಶ್ರೀಮಂತವಾಗಿದೆ. ದೇವರ ದಾಸಿಮಯ್ಯ, ಕೆಂಭಾವಿ ಭೋಗಣ್ಣ ಹಾಗೂ ಹಾವಿನಹಾಳ ಕಲ್ಲಯ್ಯನಂತಹ ಆದ್ಯ ವಚನಕಾರರು ಈ ಭಾಗದ ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದಾರೆ. ದೇವರ ದಾಸಿಮಯ್ಯನವರು ಡಾಂಭಿಕ ಭಕ್ತಿಯನ್ನು ಖಂಡಿಸಿ ಕಾಯಕದ ಮಹತ್ವವನ್ನು ಸಾರಿದರೆ, ಕೆಂಭಾವಿ ಭೋಗಣ್ಣನವರು ವರ್ಣ ಮತ್ತು ಜಾತಿ ವ್ಯವಸ್ಥೆಯ ವಿರುದ್ಧ ಸಿಡಿದೆದ್ದು ಶೋಷಿತರ ಪರ ದನಿ ಎತ್ತಿದರು. ಅಂತೆಯೇ, ಹಾವಿನಹಾಳ ಕಲ್ಲಯ್ಯನವರು ವೈದಿಕ ಧರ್ಮದ ಅಸಮಾನತೆಯನ್ನು ಧಿಕ್ಕರಿಸಿ ಸಕಲ ಮನುಕುಲದ ಸಮಾನತೆಯನ್ನು ದಿಟ್ಟವಾಗಿ ಪ್ರತಿಪಾದಿಸಿದರು. ಈ ಮೂವರೂ ಶರಣರು ಮೂಢನಂಬಿಕೆಗಳನ್ನು ನಿರಾಕರಿಸಿ, ಸತ್ಯ, ಸಮಾನತೆ ಹಾಗೂ ನಿಜಭಕ್ತಿಯ ಮೌಲ್ಯಗಳನ್ನು ಎತ್ತಿಹಿಡಿಯುವ ಮೂಲಕ ಸಮಸಮಾಜದ ನಿರ್ಮಾಣಕ್ಕೆ ಹಾಕಿದ ಭದ್ರ ಬುನಾದಿ ಮತ್ತು ಅವರ ಸಾಹಿತ್ಯಕ ಸಾಧನೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

**KEYWORDS:** ಬಸವಪೂರ್ವ ವಚನಕಾರರು, ದೇವರ ದಾಸಿಮಯ್ಯ, ಕೆಂಭಾವಿ ಭೋಗಣ್ಣ, ಹಾವಿನಹಾಳ ಕಲ್ಲಯ್ಯ, ಸಾಮಾಜಿಕ ಸಮಾನತೆ.

* **ಡಾ. ಎಂ.ಎಸ್. ಮಾಗಣಗೇರಿ**, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಸಂಗಮೇಶ್ವರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ.

ಯಾದಗಿರಿ ಜಿಲ್ಲೆಯ ಸುರಪುರ ಇತಿಹಾಸ, ಸಾಹಿತ್ಯ, ಕಲೆ ಮತ್ತು ಸಾಂಸ್ಕೃತಿಕ ಪರಂಪರೆಯಿಂದ ಶ್ರೀಮಂತವಾಗಿದೆ. ಬ್ರಿಟಿಷ್–ಸುರಪುರ ಕಾಳಗ ಮತ್ತು ಸ್ಥಳೀಯ ಜನಪದ ಕಾವ್ಯಗಳಿಗೆ ಪ್ರಸಿದ್ಧವಾಗಿದೆ. ಪ್ರಮುಖವಾಗಿ ಕನ್ನಡ, ಸಂಸ್ಕೃತ, ತೆಲುಗು ಮತ್ತು ಉರ್ದು ಭಾಗಗಳಲ್ಲಿನ ಸಾಹಿತ್ಯವು ಇಲ್ಲಿನ ಸಾಂಸ್ಕೃತಿಕ ಪ್ರಭಾವವನ್ನು ಎತ್ತಿ ತೋರುತ್ತದೆ. ಅಲ್ಲದೆ ಪ್ರಪಂಚದಲ್ಲಿಯೇ ವಿಶಿಷ್ಟವಾಗಿ ಗುರುತಿಸಿಕೊಂಡಿರುವ 'ವಚನ ಸಾಹಿತ್ಯ' ಕ್ಷೇತ್ರಕ್ಕೂ ಕೂಡ ತನ್ನದೇಯಾದ ಕೊಡುಗೆ ನೀಡಿದೆ.

**ದೇವರ ದಾಸಿಮಯ್ಯ**

ದೇವರ ದಾಸಿಮಯ್ಯ ವಚನ ಸಾಹಿತ್ಯದ ಆದ್ಯ ಪ್ರವರ್ತಕನೆಂದು ಗುರುತಿಸಿಕೊಳ್ಳುತ್ತಾನೆ. ವೃತ್ತಿಯಲ್ಲಿ ನೆಯ್ಗೆಕಾರನಾದ ದಾಸಿಮಯ್ಯನವರು ಶಿವನಿಗೆ ಬಟ್ಟೆಯನ್ನು ಕೊಟ್ಟು ಅಪೂರ್ವ ಭಕ್ತಿ ಮೆರೆದಂತೆ ಐತಿಹ್ಯ ಪುರಾಣಗಳಲ್ಲಿ ಉಲ್ಲೇಖಗಳು ಸಿಗುತ್ತವೆ. ದುಗ್ಗಲೆಯೆಂಬ ಶರಣೆಯೊಂದಿಗೆ ಸಂಸಾರಿಯೂ ಆಗಿದ್ದ ಜೇಡರ ದಾಸಿಮಯ್ಯರನ್ನೇ ಮೊದಲ ವಚನಕಾರರೆಂದು ಗುರುತಿಸಲಾಗುತ್ತದೆ. ಅಖಂಡ ಸುರಪುರ ತಾಲೂಕಿನ ಮುದನೂರು ಗ್ರಾಮದವನಾದ ನೇಕಾರ ದಾಸಿಮಯ್ಯ ತನ್ನ ಸತಿ ದುಗ್ಗಲೆಯೊಂದಿಗೆ ಕಾಯಕವನ್ನೇ ಕೈಲಾಸವಾಗಿಸಿಕೊಂಡ ಸಾಧಕ.

ದೇವರ ದಾಸಿಮಯ್ಯ ಮುದನೂರಿನ ಸಮೀಪದಲ್ಲಿರುವ ಶೈವ ಕೇಂದ್ರವಾದ ಶ್ರೀಶೈಲದಲ್ಲಿ ಶ್ರೀ ಚಂದ್ರಗುಂಡ ಶಿವಾಚಾರ್ಯರ ಗುರುಕುಲದಲ್ಲಿ ಅಪಾರ ವಿದ್ಯೆಯೊಂದಿಗೆ ಉತ್ತಮ ಸಂಸ್ಕಾರವನ್ನು ಪಡೆದು ಜ್ಞಾನವಂತ. ದಾಸಿಮಯ್ಯ ಯಾವುದನ್ನೂ ಪ್ರಶ್ನಿಸದೆ ಸ್ವೀಕರಿಸುವ ಮನೋಭಾವದವನಲ್ಲ. ಪ್ರಖರ ವೈಚಾರಿಕ ನೆಲೆಗಟ್ಟಿನ ಅಸದೃಶ ವ್ಯಕ್ತಿತ್ವವನ್ನು ಹೊಂದಿದವರಾಗಿದ್ದ. ಹೆಂಡತಿ ದುಗ್ಗಳೆಯನ್ನು ಕುರಿತು ಅವನೇ ರಚಿಸಿದ ವಚನವೇ ಇದನ್ನು ಸ್ಪಷ್ಟಪಡಿಸುತ್ತದೆ. ಬಂದುದನರಿದು ಬಳಸುವಳು ಬಂದುದ ಪರಿಣಾಮಿಸುವಳು ಬಂಧು ಬಳಗವ ಮರೆಸುವಳು ದುಗ್ಗಳೆಯ ತಂದು ಬದುಕಿದೆನು ಕಾಣಾ ರಾಮನಾಥ.

**ದೇವರ ದಾಸಿಮಯ್ಯನ ವಚನಗಳು**

'ರಾಮನಾಥ' ಎಂಬ ಅಂಕಿತದಲ್ಲಿ ಬರೆಯಲಾದ ದೇವರ ದಾಸಿಮಯ್ಯನ ಸುಮಾರು 150 ವಚನಗಳು ದೊರೆತಿವೆ.

**ಮೊಲೆ ಮೂಡಿ ಬಂದರೆ ಹೆಣ್ಣೆಂಬರು**
**ಗಡ್ಡ ಮೀಸೆ ಬಂದರೆ ಗಂಡೆಂಬರು**
**ನಡುವೆ ಸುಳಿಯುವಾತ್ಮನು**
**ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ**

ಎಂದು ಸಾರುವಲ್ಲಿ ತೋರಿದ ಜನಪರ ಕಾಳಜಿ ಇಂದಿಗೂ ಅನ್ವಯಿಕ. ಶಿವ ಜಗತ್ತನ್ನೇ ವ್ಯಾಪಿಸಿಕೊಂಡಂತೆ, ಜಗತ್ತೇ ಶಿವನ ರೂಪ ಎಂಬ ನಿಲುವಿನೊಂದಿಗೆ, "ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಸೂಸುವ ಗಾಳಿ ನಿಮ್ಮ ದಾನ" ಎಂದೆನ್ನುವ ದಾಸಿಮಯ್ಯನಲ್ಲಿ ಈ ಲೋಕವನ್ನು ನೋಡುವ ಕ್ರಮ ಹೊಸತನದಿಂದ ಕೂಡಿದೆ.

**ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬದೆ?**
**ಕಡೆಗೀಲು ಬಂಡಿಗಾಧಾರ.**
**ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ**
**ಮೃಢಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ.**

ಬಂಡಿಗೆ ಆಧಾರವಾದ ಕಡೆಗೀಲಿನಂತೆ, ಶರೀರವೆಂಬ ಬಂಡಿಗೆ ಶಿವಭಕ್ತರ ನುಡಿಗಳೇ ಆಧಾರ. ಅನುಭಾವವಿಲ್ಲದ ಭಕ್ತಿ ವ್ಯರ್ಥ ಎನ್ನುತ್ತಾನೆ.

**ಬರಿ ಸಠಗನ ಭಕ್ತಿ ದಿಟವೆಂದು ನಚ್ಚಲು ಬೇಡ**
**ಮಠದೊಳಗಣ ಬೆಕ್ಕು ಇಲಿಯ ಕಂಡು**
**ಪುಟನೆಗೆದಂತಾಯಿತ್ತು ಕಾಣಾ ರಾಮನಾಥ.**

ಸುಳ್ಳು, ಕಪಟತನ, ವಂಚನೆಯ ನಡೆನುಡಿಗಳಿಂದ ಸಹಮಾನವರಿಗೆ ಮತ್ತು ಸಮಾಜಕ್ಕೆ ಕೇಡನ್ನು ಬಗೆಯುತ್ತಾ, ಜನಮೆಚ್ಚುಗೆಯನ್ನು ಪಡೆಯಲೆಂದು ದೇವರಲ್ಲಿ ಒಲವುಳ್ಳವನಂತೆ ಬಹುಬಗೆಯ ಪೂಜೆ, ಆಚರಣೆಗಳಲ್ಲಿ ತೊಡಗಿರುವ ವ್ಯಕ್ತಿಯನ್ನು ಒಳ್ಳೆಯವನೆಂದು ನಂಬಬಾರದು ಎಂಬ ಎಚ್ಚರಿಕೆಯನ್ನು ಈ ವಚನದಲ್ಲಿ ನೀಡಲಾಗಿದೆ.

**ಸತ್ಯದ ನುಡಿ ತೀರ್ಥ ಭಕ್ತಿಯ ನಡೆ ತೀರ್ಥ**
**ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ**
**ಹರಿವ ನದಿ ಎತ್ತಣಾ ತೀರ್ಥ ರಾಮನಾಥ.**

ದೇಗುಲಗಳ ಬಳಿ ಹರಿಯುತ್ತಿರುವ ನದಿ–ತೊರೆಗಳ ನೀರು ಇಲ್ಲವೇ ದೇಗುಲದ ಪೂಜಾರಿಯು ಕೊಡುವ ನೀರನ್ನು ಪವಿತ್ರವೆಂದು ನಂಬಿರುವ ಜನರಿಗೆ, ಯಾವುದು ಪವಿತ್ರವೆಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

**ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ**
**ಇರುಳೆಲ್ಲಾ ನಡೆದನಾ ಸುಂಕಕಂಜಿ**
**ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು**
**ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥ.**

ಈ ವಚನದಲ್ಲಿ 'ಅಳಿಮನದವನು' ಎಂಬ ಪದವನ್ನು "ಮನದಲ್ಲಿ ಕೆಟ್ಟ ಉದ್ದೇಶವನ್ನುಳ್ಳ ವ್ಯಕ್ತಿ, ಚಂಚಲ ಮನದ ವ್ಯಕ್ತಿ" ಎಂಬ ಎರಡು ಬಗೆಯ ತಿರುಳಿನ ನೆಲೆಗಳಲ್ಲಿ ಗ್ರಹಿಸಿಕೊಂಡಾಗ, ಎರಡು ರೀತಿಗಳಲ್ಲಿ ವಚನದ ಇಂಗಿತವನ್ನು ಮನಗಾಣಬಹುದು. ಮೊದಲನೆಯದು ಮನದಲ್ಲಿ ಕೆಟ್ಟ ಉದ್ದೇಶವನ್ನು ಹೊಂದಿ, ಹೊರನೋಟಕ್ಕೆ ದೇವರಲ್ಲಿ ಒಲವುಳ್ಳವನಂತೆ ನಟಿಸುತ್ತಾ, ಜನರನ್ನು ಮತ್ತು ಸಮಾಜವನ್ನು ವಂಚಿಸುವ ವ್ಯಕ್ತಿಯು ಕಟ್ಟಕಡೆಗೆ ಜೀವನದಲ್ಲಿ ಏನನ್ನೂ ಗಳಿಸಲಾಗದೆ, ತನ್ನಲ್ಲಿರುವುದನ್ನೂ ಕಳೆದುಕೊಳ್ಳುತ್ತಾನೆ. ಎರಡನೆಯದು ಇತ್ತ ಒಳಿತನ್ನು ಮಾಡಲಾಗದೆ, ಅತ್ತ ಕೆಟ್ಟದ್ದನ್ನು ಬಿಡಲಾಗದೆ, ಅತ್ತಿತ್ತ ಹೊಯ್ದಾಡುವ ಚಂಚಲ ಮನಸ್ಸಿನ ವ್ಯಕ್ತಿಯು ಜೀವನದಲ್ಲಿ ಏನನ್ನೂ ಪಡೆಯಲಾಗದೆ, ತನಗೆ ತಾನೆ ಕೇಡನ್ನು ಬಗೆದುಕೊಳ್ಳುತ್ತಾನೆ, ಹಾನಿ ಮಾಡಿಕೊಳ್ಳುತ್ತಾನೆ.

**ಹಸಿವೆಂಬ ಹೆಬ್ಬಾವು ಬಸುರ ಬಂದು ಹಿಡಿದಡೆ**
**ವಿಷವೇರಿತ್ತಯ್ಯಾ ಆ ಪಾದಮಸ್ತಕಕ್ಕೆ**
**ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ**
**ವಸುಧೆಯೊಳಗೆ ಆತನೆ ಗಾರುಡಿಗ ಕಾಣಾ ರಾಮನಾಥ.**

ಹೊಟ್ಟೆಯ ಹಸಿವನ್ನು ನೀಗಿಸಿಕೊಳ್ಳಲು ಬೇಕಾದ ಉಣಿಸು ತಿನಸುಗಳು ದೊರೆಯದೆ, ದಿನನಿತ್ಯವೂ ಹಸಿವಿನ ಬೇಗೆಯಲ್ಲಿ ಬೇಯುತ್ತಿರುವ ಕೋಟಿಗಟ್ಟಲೆ ಜನರ ಹಸಿವಿನ ಸಂಕಟವನ್ನು ತಣಿಸುವ ಕೆಲಸವು ಜಗತ್ತಿನಲ್ಲಿ ಬಹುದೊಡ್ಡ ಸವಾಲಿನದು ಎಂಬುದನ್ನು ಈ ವಚನದಲ್ಲಿ ಹೇಳಲಾಗಿದೆ.

**ಕೆಂಭಾವಿ ಭೋಗಣ್ಣ**

ಕೆಂಭಾವಿ ಭೋಗಣ್ಣನು ಬಸವ ಪೂರ್ವಯುಗದ ವೀರಮಾಹೇಶ್ವರ ನಿಷ್ಠೆ ಮತ್ತು ಜಂಗಮನಿಷ್ಠೆಯುಳ್ಳ ಶರಣ. ಜಾತೀಯತೆಯನ್ನು ವಿರೋಧಿಸಿದ ರಾಜತ್ವವನ್ನು ಪ್ರತಿಭಟಿಸಿದ ಅಪ್ರತಿಮ ಶಿವಭಕ್ತ. ಈತನ ಭಕ್ತಿ ಮತ್ತು ಜಂಗಮ ನಿಷ್ಠೆಯನ್ನು ಕುರಿತು ಬಸವಾದಿ ಪ್ರಮಥರು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ಅಪ್ರತಿಮ ನಿಷ್ಠೆ ಮತ್ತು ಭಕ್ತಿಯಿಂದ ಶಿವನನ್ನೇ ಕರೆಯಿಸಿಕೊಂಡ ಶಿವಶರಣನೀತ. ಈ ಶಿವಶರಣನನ್ನು ಕುರಿತು ಕಾವ್ಯ ರಚಿಸಿದ ಕವಿಗಳಲ್ಲಿ ಹರಿಹರ ಹಾಗೂ ಪಾಲ್ಕುರಿಕೆಯ ಸೋಮನಾಥರೇ ಮೊದಲಿಗರಾಗಿದ್ದಾರೆ. ಬಸವ ಪೂರ್ವದ ಶಿವಶರಣರು ಏಕ ಕಾಲಕ್ಕೆ ರಾಜತ್ವ ಮತ್ತು ವೈದಿಕತ್ವಗಳೆರಡನ್ನು ಪ್ರತಿಭಟಿಸಿದ್ದು ಅಲ್ಲದೆ ವರ್ಣ, ಜಾತಿ, ವರ್ಗಗಳ ನಿರಾಕರಣೆ ಇವರ ಮುಖ್ಯ ಗುರಿಯಾಗಿತ್ತು. ಯಾವ ಕುಲ ಜಾತಿಯವನೇ ಇರಲಿ ಶಿವಲಿಂಗವ ಧರಿಸಿದಾತ ಜಂಗಮನೆಂದು ಪರಿಗಣಿಸಿ ಅಸ್ಪೃಶ್ಯರನ್ನು ಶಿವಭಕ್ತರನ್ನಾಗಿಸಿದ್ದರು. ಅಂತೆಯೇ ಮತ ಸಂಘರ್ಷ, ವರ್ಣಸಂಘರ್ಷ ಮತ್ತು ಧರ್ಮಸಂಘರ್ಷಗಳ ಮೂಲಕ ವೀರಮಾಹೇಶ್ವರ ನಿಷ್ಠೆ ಹಾಗೂ ಶಿವಸಂಸ್ಕೃತಿಯ ಪಾರಮ್ಯವನ್ನು ಸ್ಥಾಪಿಸಿದ್ದಾರೆ. ಹೀಗಾಗಿ ಈ ಶರಣರು ಜನಪರ ಹಾಗೂ ಜೀವನಪರ ಧೋರಣೆ ಹೊಂದಿದವರಾಗಿದ್ದು, ಪರಂಪರಾನುಗತವಾದ ಆಚರಣೆಗಳ ನಿರಾಕರಣೆ ಮಾಡಿದ್ದನ್ನು ಒಳಗೊಂಡಿದ್ದು ಆ ವಿವರಗಳು ಅವರ ವೈಯಕ್ತಿಕ ಚರಿತ್ರೆಯನ್ನು ಬಿಂಬಿಸುವ ಅನೇಕ ಶಾಸನ-ಕಾವ್ಯ ಪುರಾಣಗಳ ಮೂಲಕ ತಿಳಿಯಬಹುದಾಗಿದೆ.

ಭೋಗಣ್ಣನು ಜೀವಿಸಿದ್ದ ಕೆಂಭಾವಿಯ ಅರಸನಾಗಿದ್ದ ಚಂದಿಮರಸನು ಆರಂಭದಲ್ಲಿ ವೈದಿಕ ಧರ್ಮದ ಪರವಾಗಿದ್ದವನು. ಭೋಗಣ್ಣನ ಅಪ್ರತಿಮ ಶಿವನಿಷ್ಠೆ ಮತ್ತು ಜಂಗಮ ನಿಷ್ಠೆಯ ಮಹಿಮೆಯಿಂದ ಪ್ರಭಾವಿತನಾಗಿ ವೀರಶೈವ ಧರ್ಮವನ್ನು ಸ್ವೀಕರಿಸುವುದಾಗಿ ಕಾವ್ಯ-ಪುರಾಣಗಳ ಉಲ್ಲೇಖದಿಂದ ತಿಳಿದು ಬರುತ್ತದೆ. ನಂತರದ ಕಾಲದಲ್ಲಿ ರಾಜತ್ವವನ್ನು ತ್ಯಜಿಸಿ ಕೆಂಭಾವಿಯನ್ನು ಬಿಟ್ಟು ಕೃಷ್ಣಾನದಿ ತೀರದಲ್ಲಿರುವ ಚಿಮ್ಮಲಗಿ ಗ್ರಾಮದಲ್ಲಿ ವಾಸಿಸಿದನೆಂದು ತಿಳಿದು ಬರುತ್ತದೆ. ಈ ಅವಧಿಯಲ್ಲಿಯೇ ನಿಜಗುಣಯೋಗಿಯಿಂದ ಶಿವದೀಕ್ಷೆಯನ್ನು ಪಡೆದುಕೊಂಡಿರಬಹುದಾಗಿದೆ. ತನ್ನ ಕೊನೆಯ ಕಾಲವನ್ನು ಇಲ್ಲಿಯೇ ಕಳೆದಿರಬಹುದಾಗಿ ತಿಳಿದು ಬರುತ್ತದೆ. ಚಂದಿಮರಸನ ಹೆಸರಿನ ದೇವಾಲಯವು ಚಿಮ್ಮಲಗಿ ಗ್ರಾಮದಲ್ಲಿ ಇದೆ. ಈ ಗ್ರಾಮವು ಗದಗ-ವಿಜಾಪುರ ರೈಲುಮಾರ್ಗದ ಸೀತಿಮನೆ ಸ್ಟೇಶನ್ನಿನ ಸಮೀಪದಲ್ಲಿ ಕೃಷ್ಣಾನದಿಯ ಸೇತುವೆಯ ಪಶ್ಚಿಮಕ್ಕೆ ಎರಡು ಮೈಲಿ ದೂರದಲ್ಲಿರುವುದಾಗಿ ಫ. ಗು. ಹಳಕಟ್ಟಿಯವರು ತಮ್ಮ 'ಶಿವಶರಣರ ಚರಿತ್ರೆಗಳು' ಪುಸ್ತಕದಲ್ಲಿ ದಾಖಲಿಸಿದ್ದಾರೆ. ಚಿಮ್ಮಲಗಿಯಲ್ಲಿರುವ ಚಂದಿಮರಸನ ಹೆಸರಿನ ದೇವಾಲಯವು ಕೃಷ್ಣಾನದಿಗೆ ಅಡ್ಡಲಾಗಿ ಕಟ್ಟಿರುವ ಬ್ಯಾರೇಜಿನ ಹಿನ್ನೀರಿನಲ್ಲಿ ಮುಳುಗಿರುತ್ತದೆ. ನೀರು ಕಡಿಮೆಯಾದಾಗ ದೇವಾಲಯ ಕಂಡುಬರುತ್ತದೆ.

ಭೋಗಣ್ಣ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಕೆಂಭಾವಿಯವರಾಗಿದ್ದು, ಜಾತಿ ಪದ್ಧತಿ, ಅಸ್ಪೃಶ್ಯತೆ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ನಿರಂತರವಾಗಿ ಹೋರಾಡಿ ಧ್ವನಿ ಎತ್ತಿದ ವೀರಾಗ್ರಣಿ. ಇವರು ಮೇಲ್ವರ್ಗದವರ ದಬ್ಬಾಳಿಕೆಯನ್ನು ಧಿಕ್ಕರಿಸಿ, ಕೆಳವರ್ಗದ ಜನರಿಗೆ ಸ್ವಾಭಿಮಾನದ ಬದುಕು ಕಲ್ಪಿಸಲು ಹೋರಾಡಿದ ಸಾಮಾಜಿಕ ಕ್ರಾಂತಿಕಾರಿಯಾಗಿದ್ದರು. ಶೋಷಿತರ ಪರವಾಗಿ ನಿಲ್ಲುವ ವ್ಯಕ್ತಿತ್ವದವರಾಗಿದ್ದರು. ಅವರ ತ್ಯಾಗ ಮತ್ತು ಹೋರಾಟದ ಕಥೆಗಳು ಆ ಭಾಗದಲ್ಲಿ ಪ್ರಸಿದ್ಧವಾಗಿವೆ. ಇಂದಿಗೂ ಈ ಭಾಗದಲ್ಲಿ ಅವರ ಹೋರಾಟದ ಬಗೆಗಿನ ದಂತಕಥೆಗಳು ಜನಪ್ರಿಯವಾಗಿವೆ.

ಬಸವಪೂರ್ವ ಯುಗದಲ್ಲಿಯೇ ಸಮ ಸಮಾಜದ ಕನಸು ಕಂಡಿದ್ದ ವಚನಕಾರ ಕೆಂಭಾವಿಯ ಭೋಗಣ್ಣ. ಶಿವಶರಣರು ದಲಿತನಿಗೆ ತನ್ನ ಮನೆಯಲ್ಲಿ ಕರೆದು ನೀರು ಕೊಟ್ಟು ಸತ್ಕರಿಸಿದ್ದಕ್ಕಾಗಿ ರಾಜಾಜ್ಞೆಯಂತೆ ಗಡಿಪಾರು ಶಿಕ್ಷೆಗೆ ಒಳಗಾಗಿ ಪಟ್ಟಣವನ್ನು ತೊರೆದಾಗ ಸಾಕ್ಷಾತ್ ಶಿವನೇ ಪಟ್ಟಣದ ಗುಡಿಯೊಳಗಿನ ಲಿಂಗರೂಪದಲ್ಲಿ ಆ ಶಿವಶರಣನ ಬೆನ್ನುಹತ್ತಿ ಹೋದ ಐತಿಹ್ಯದ ಇತಿಹಾಸ ಬಸವಪೂರ್ವ ಯುಗ 11ನೇ ಶತಮಾನದಲ್ಲಿ ಕಾಣಬಹುದು. ಆ ಮಹಾನ್ ಶಿವಶರಣನೇ ಆದ್ಯ ವಚನಕಾರ ಕೆಂಭಾವಿಯ ಭೋಗಣ್ಣ. ಕಲ್ಯಾಣಿ ಚಾಲುಕ್ಯರ ಆಡಳಿತಾವಧಿಯಲ್ಲಿ ಸಾಮಂತ ಅರಸ ಚಂದಿಮರಸನ ರಾಜಧಾನಿಯಾಗಿದ್ದ ಕೆಂಭಾವಿ ಪಟ್ಟಣವು ಅಗ್ರಹಾರ (ವಿದ್ಯಾಕೇಂದ್ರ)ವೂ ಆಗಿತ್ತು. ಶೈವ ಬ್ರಾಹ್ಮಣನಾದ ಭೋಗಣ್ಣನು ಚಂದಿಮರಸನ ಆಸ್ಥಾನ ಪಂಡಿತನಾಗಿದ್ದ ಎಂದು ಹೇಳಲಾಗುತ್ತದೆ. ಅದೊಂದು ದಿನ ದಲಿತನೊಬ್ಬ ಭೋಗಣ್ಣನ ಮನೆಯ ಮುಂದೆ ಹಾದು ಹೋಗುತ್ತಿದ್ದಾಗ ನೀರು ಕೇಳುತ್ತಾನೆ. ಶರಣ ಭೋಗಣ್ಣ ಆತನನ್ನು ಮನೆಯೊಳಗೆ ಕರೆದು, ನೀರು ಕೊಟ್ಟು ಸತ್ಕರಿಸುತ್ತಾನೆ. ಇದನ್ನು ತಿಳಿದ ಆಸ್ಥಾನದ ಪಂಡಿತರು ರಾಜಾ ಚಂದಿಮರಸನಿಗೆ ದೂರು ಕೊಟ್ಟು ಭೋಗಣ್ಣನನ್ನು ಗಡಿಪಾರು ಮಾಡುವಂತೆ ಒತ್ತಾಯಿಸುತ್ತಾರೆ. ಧರ್ಮ ವಿರೋಧಿ ಆರೋಪದ ಮೇಲೆ ಭೋಗಣ್ಣನನ್ನು ರಾಜ್ಯದಿಂದ ಗಡಿಪಾರು ಮಾಡಲಾಗುತ್ತದೆ. ರಾಜನ ಆಜ್ಞೆಯಂತೆ ಹೊರನಡೆದ ಶಿವಶರಣ ಭೋಗಣ್ಣನ ಹಿಂದೆ ಶಿವಭಕ್ತನೇ ಇಲ್ಲದ ಮೇಲೆ ನಾನೇಕೆ ಇಲ್ಲಿ ಇರುವುದು ಎಂದು ಸಾಕ್ಷಾತ್ ಶಿವನ ಸ್ವರೂಪಿ ದೇವಾಲಯದ ಲಿಂಗಗಳೂ ಹೊರಟು ಹೋಗುತ್ತವೆ. ತಕ್ಷಣ ಕ್ಷಾಮ ತಲೆದೋರಿ ಪ್ರಜೆಗಳು ಅನಾರೋಗ್ಯಕ್ಕೆ ಒಳಗಾಗುತ್ತಾರೆ. ಶಿವಭಕ್ತನನ್ನು ಗಡಿಪಾರು ಮಾಡಿರುವುದಕ್ಕಾಗಿಯೇ ಈ ಸಮಸ್ಯೆ ಎಂದು ತಪ್ಪಿನ ಅರಿವಾಗಿ ರಾಜಾ ಚಂದಿಮರಸ ಶರಣ ಭೋಗಣ್ಣನಿಗೆ ಪಟ್ಟಣಕ್ಕೆ ಮರಳುವಂತೆ ಮನವಿ ಮಾಡಿಕೊಳ್ಳುತ್ತಾನೆ. ಭೋಗಣ್ಣ ಮರಳುತ್ತಿದ್ದಂತೆ ಆತನ ಹಿಂದೆ ಹೋದ ಎಲ್ಲಾ ಲಿಂಗಗಳು ಕೂಡ ಮರಳಿ ತಮ್ಮ ತಮ್ಮ ಸ್ಥಾನಕ್ಕೆ ಸೇರುವ ಧಾವಂತದಲ್ಲಿ ಅವಸರಿಸಿ ಸ್ಥಾನಪಲ್ಲಟಗೊಳ್ಳುತ್ತವೆ ಎಂಬ ಐತಿಹ್ಯವಿದೆ.

ಇಂದಿಗೂ ಪಟ್ಟಣದಲ್ಲಿ ದೊಡ್ಡ ಪಾಣಿಪೀಠದ ಮೇಲೆ ಸಣ್ಣ ಲಿಂಗ, ಸಣ್ಣ ಪಾಣಿಪೀಠದ ಮೇಲೆ ದೊಡ್ಡ ಲಿಂಗ ಇರುವುದನ್ನು ಪಟ್ಟಣ ಚತುರ್ಕೂಟದ ಪಂಚಲಿಂಗದ ರೇವಣ ಸಿದ್ದೇಶ್ವರ ದೇವಾಲಯದಲ್ಲಿ ಸ್ಥಾನಪಲ್ಲಟಗೊಂಡ ಲಿಂಗಗಳು ಉದಾಹರಣೆಯಾಗಿ ನೋಡಬಹುದು. ಹೀಗೆ ಬಸವ ಪೂರ್ವಯುಗದಲ್ಲಿಯೇ ಸಮ ಸಮಾಜದ ಕನಸು ಕಂಡು ಜಾತೀಯತೆ ವಿರುದ್ಧ ಸಿಡಿದೆದ್ದು, ಸಾಮರಸ್ಯದ ಬದುಕಿಗಾಗಿ ಹೋರಾಟದ ಕೂಗು ಈ ಸಗರನಾಡಿನ ಕೆಂಭಾವಿಯ ಆದ್ಯ ವಚನಕಾರ ಭೋಗಣ್ಣನಿಂದ ಆರಂಭವಾಗಿತ್ತು. ಭೋಗಣ್ಣನ ಜನ್ಮಸ್ಥಳ ಕೆಂಭಾವಿಯಲ್ಲಿ ಸುಮಾರು ಎಂಟುನೂರು ವರ್ಷಗಳ ಹಿಂದೆಯೇ ನಿರ್ಮಾಣವಾದ ಆತನ ಸುಂದರ ಮಂದಿರ ಪೂರ್ವಾಭಿಮುಖ ಹಾಗೂ ಪಶ್ಚಿಮಾಭಿಮುಖವಾಗಿ ದ್ವಿಕೂಟದಲ್ಲಿ ಇದ್ದು, ಈ ಮಂದಿರವು ಬೃಹತ್ತಾದ ಕಲ್ಯಾಣಿಯ ಮಧ್ಯಭಾಗದಲ್ಲಿದೆ. ಈ ದೇವಾಲಯ ಕಲ್ಯಾಣಿ ಚಾಲುಕ್ಯರ ಕಾಲದ ಬಹು ಅಮೂಲ್ಯ ಸ್ಮಾರಕ ಸ್ಥಳವಾಗಿದೆ.

**ಭೋಗಣ್ಣನ ವಚನಗಳು**

ಕೆಂಭಾವಿ ಭೋಗಣ್ಣ (ಸುಮಾರು 1160) 12ನೇ ಶತಮಾನದ ಬಸವಪೂರ್ವಯುಗದ ಪ್ರಮುಖ ಶಿವಶರಣ. ಇವರ 'ನಿಜಗುರು ಭೋಗೇಶ್ವರ' ಅಂಕಿತನಾಮದಲ್ಲಿ 22 ವಚನಗಳು ದೊರೆತಿವೆ. ಈ ವಚನಗಳು ಶರಣರ ಸ್ತುತಿ, ಭವಿ-ಭಕ್ತ ಭೇದ, ಹಾಗೂ ಸಾಕಾರ-ನಿರಾಕಾರ ಅಂಗ-ಲಿಂಗಗಳ ಸಂಬಂಧ, ಶರಣಸತಿ-ಲಿಂಗಪತಿ ಭಾವ, ಬೆಡಗಿನ ಪರಿಭಾಷೆ ತತ್ವಗಳನ್ನು ಪ್ರತಿಪಾದಿಸುತ್ತವೆ. ವಚನಗಳು ಹೆಚ್ಚು ದೀರ್ಘವಾಗಿದ್ದು ಗದ್ಯದ ಲಕ್ಷಣಗಳನ್ನು ಹೊಂದಿವೆ.

ಕೆಲವು ವಚನಗಳಲ್ಲಿ ವೇಷಡಂಭಕರ, ಶಬ್ದಾಡಂಬರದ ಭವಭಾರಿಗಳ ಟೀಕೆ ತೀಕ್ಷ್ಣವಾಗಿ ಕಾಣಿಸುತ್ತದೆ. ಅಲ್ಲದೆ ಜಾತಿ ವ್ಯವಸ್ಥೆ ಮತ್ತು ಬ್ರಾಹ್ಮಣ್ಯದ ಅಪಮೌಲ್ಯವನ್ನು ವಿರೋಧಿಸಿ, ಸಮಾನತೆಗಾಗಿ ಪ್ರತಿಭಟಿಸುತ್ತವೆ.

**ಆಗಮ ನಿಗಮ ಶಾಸ್ತ್ರ ಪುರಾಣವೆಂಬ**
**ಅಂಧಕನ ಕೈಗೆ ಕೋಲು ಕೊಟ್ಟು ನಡೆಸಿಕೊಂಡು ಹೋಗುವಾಗ,**
**ತನ್ನ ಕಣ್ಣುಗೆಟ್ಟಡೆ ಮುಂದಕ್ಕೆ ಗಮನವಿಲ್ಲ.**
**ಹಿಂದಕ್ಕೆ ತಿರುಗಲರಿಯದೆ,**
**ಎರಡಕ್ಕೆ ಕೆಟ್ಟ ಜಂಬುಕನಂತೆ ಆಯಿತ್ತು ನೋಡಾ.**
**ಸಜ್ಜನ ಗಂಡನ ಕದ್ದು, ಕಳ್ಳನ ಹಿಂದೆ ಹೋದ ಸತಿಯಂತೆ ಆದರಲ್ಲಾ.**
**ಸಂತೆಯಲ್ಲಿ ಗುಡಿಸಲನಿಕ್ಕಿ ಹಡೆದುಂಬ ಸೂಳೆಯಂತೆ,**
**ಮನವೆ ಸೂಳೆಯಾಗಿ, ಮಾತಿನ ಮಾಲೆಯ ಸರವನಿಕ್ಕಿಕೊಂಡು,**
**ವಾಚಾಳಿಗತನದಿಂದ ಒಡಲ ಹೊರೆವವರೆಲ್ಲರೂ**
**ಶರಣರಪ್ಪರೆ? ಅಲ್ಲಲ್ಲ. ಅದೆಂತೆಂದಡೆ:**
**ತನುಕರಗಿ, ಮನ ಪುಳಕವಾದ ಮಹಾಮಹಿಮರಿಗಲ್ಲದೆ**
**ಉಚ್ಚಿಯ ಬಚ್ಚಲಲ್ಲಿ ಓಲಾಡುವ**
**ತೂತುಜ್ಞಾನಿಗಳಿಗೆಂತಪ್ಪದು ಹೇಳಾ?**
**ಕಾಲಾಳು ಆಕಾಶವನಡರಿಹೆನೆಂಬ ಪರಿಯೆಂತೊ?**
**ಬ್ರಹ್ಮಪುರ ವೈಕುಂಠ ರುದ್ರಪುರ ಅಷ್ಟಾದಿ ಕೈಲಾಸವೆಂಬ**
**ಈ ಪಂಚ ಗ್ರಾಮಂಗಳ ಮರ್ಮ ಕರ್ಮವಳಿದ**
**ಮಹಾದೇವಂಗಲ್ಲದೆ ಮುಂದಕ್ಕೆ ಅಡಿಯಿಡಬಾರದು.**
**ಪಿಪೀಲಿಕ ಕಪಿಯ ಮತವೆಂಬ ಪಥ ಮೀರಿ,**
**ವಿಹಂಗವೆಂಬ ವಾಹನಮಂ ಏರಿ, ಬ್ರಹ್ಮಾಂಡಕ್ಕೆ ದಾಳಿ ಮಾಡಿ,**
**ಸುವರ್ಣಪುರಮಂ ಸುಟ್ಟು ಸೂರೆಗೊಂಡ ಮಹಾನುಭಾವಿಗಳ**
**ತೋರಿ ಬದುಕಿಸಾ.**
**ನಿಜಗುರು ಭೋಗೇಶ್ವರಾ, ನಾ ನಿಮ್ಮ ಧರ್ಮವ ಬೇಡಿಕೊಂಬೆ.**
**ಶೂನ್ಯ ನಿಶ್ಶೂನ್ಯಗಳಿಲ್ಲದಂದು,**
**ಸುರಾಳ ನಿರಾಳವಿಲ್ಲದಂದು,**
**ಬೆಳಗು ಕತ್ತಲೆಯಿಲ್ಲದಂದು,**
**ಮಹಾಬೆಳಗಿನ ನಿಜಪ್ರಕಾಶವೇ ಗಟ್ಟಿಗೊಂಡು**
**ಮೂರ್ತಿಗೊಂಡಿಪ್ಪಲ್ಲಿ,**
**ಅಜಾತನೆಂಬ ಶ್ರೀಗುರುವಿನ ಜಾತವು.**
**ಕಂಗಳು ಬೆಳಗಿಸಲಾಗಿ ಪುನೀತನಾಗಿ, ಶಿಷ್ಯನು ದೇವಕರ್ಮವ**
**ಭಕ್ತಿ ವೈರಾಗ್ಯಮಂ ಮಾಡಬೇಕೆನಲು,**
**ಆ ಶಿಷ್ಯನ ಮನೋಭಾವದಿ ಕಾರುಣ್ಯ ಪುಟ್ಟಿ,**
**ಕರಕ್ಕೆ ಲಿಂಗವಾದ ಆ ಶಿಷ್ಯನ ಕೈಯಲ್ಲಿ**
**ಅಷ್ಟವಿಧಾರ್ಚನೆ ಷೋಡಶೋಪಚಾರದಲ್ಲಿ**
**ಪೂಜಿಸಿಕೊಳಬೇಕಾಗಿ ಜಂಗಮವಾದ.**
**ಇಂತೀ ಗುರು ಲಿಂಗ ಜಂಗಮವೆಂಬ**

ತ್ರಿವಿಧವೂ ಶಿಷ್ಯನಿಂದಾಯಿತ್ತಲ್ಲದೆ
ಆ ಶಿಷ್ಯ ತನ್ನಿಂದ ತಾನಾದ ನಿರಾಲಂಬನು.
ಅದೆಂತೆಂದಡೆ:
ಹೆತ್ತ ತಂದೆಗಳು ಶಿಶುವಿಗೆ ನಾಮಕರಣವನಿಕ್ಕಿ
ಹಲವಂದದಲ್ಲಿ ಕರೆದು ತೋರುವಂತೆ,
ಗುರುಲಿಂಗ ಶಿವಲಿಂಗ ಜಂಗಮಲಿಂಗ
ಸದ್ಗುರುವೆ ಮದ್ಗುರುವೆ ಘನಗುರುವೆ ಎಂದು ಪೆಸರಿಟ್ಟು ಕರೆದು,
ತನ್ನ ಒಕ್ಕುಮಿಕ್ಕ ಪ್ರಸಾದವನಿಕ್ಕಿದ ಕಾರಣ,
ನಿನ್ನ ಪೂರ್ವಾಶ್ರಯವಳಿದು ಸಕಲ ದೇವರಿಗೆ ದೇವನಾದೆ.
ಅದಕ್ಕೆ ಮುನ್ನ ನಿಮ್ಮ ಪೆಸರೇನೆಂದು ಹೇಳಾ
ನಿಜಗುರು ಭೋಗೇಶ್ವರಾ.

ವೇದ ಆಗಮ ಶಾಸ್ತ್ರ ಪುರಾಣಗಳೆಲ್ಲ ಕುರುಡನ ಕೈಗೆ ಕೋಲು ಕೊಟ್ಟು ನಡೆಸಿಕೊಂಡು ಹೋಗುವಂತೆ ವ್ಯರ್ಥ ಎನ್ನುವ ಧೋರಣೆಯಲ್ಲಿ ಅವುಗಳ ನಿರಾಕರಣೆಯಿದೆ. ಭಕ್ತನ ಕೊಂದಡೆ ಪಂಚಮಹಾಪಾತಕ ಎನ್ನುವ ಭೋಗಣ್ಣ ಕೊಲ್ಲದೆ ಮೆಲ್ಲದೆ ತಿಂಬ ಜೈನರಿನ್ನಾರೊ? ಎಂದು ಜೈನರನ್ನು ಟೀಕಿಸುವನು. ಅವನ ಉಪಮೆಗಳು ಅರ್ಥಪೂರ್ಣವಾಗಿರುವದರಿಂದ ವಚನಗಳಿಗೆ ಸಾಹಿತ್ಯಕ ಸ್ಪರ್ಶವಿದೆ. ಬಾಯಿ ಬಡುಕರನ್ನು ವ್ಯಂಗ್ಯವಾಗಿ ಟೀಕಿಸುತ್ತ ಜಾರೆ ಜಾರನ ಸ್ನೇಹದೊಳಿದ್ದು ನೀನಲ್ಲದೆ ಅಂತಃಪುರವನರಿಯೆನೆಂದು ಕಣ್ಣ ನೀರ ತುಂಬುತ್ತ ಬೋಸರಿಗತನದಿಂದ ಒಡಲ ಹೊರೆವಳಂತೆ' ಎಂದು ಹೋಲಿಕೆ ಕೊಡುವನು.

ಹಾಲು ಅನಿಲ ಕಂದಮೂಲ ಪರ್ಣಾಂಬು ಫಲಾದಿಗಳನೆ
ಆಹಾರವ ಕೊಂಡು ಮುಕ್ತರಾದೆಹೆವೆಂಬ ಅಣ್ಣಗಳು ನೀವು ಕೇಳಿರೆ.
ಆಹಾರವ ಕೊಂಡು ಅಣುರೇಣು ನೊರಜ ಸರ್ವ ಸರ್ಪ ಪಕ್ಷಿಗಳು
ವಾಯುವನೇ ಉಂಡು ಬೆಳೆವವು ನೋಡಾ.
ಖಗ ಮೃಗ ವಾನರ ಕ್ರಿಮಿಕೀಟಕ ಇವೆಲ್ಲವೂ
ಕಂದಮೂಲ ಪರ್ಣಾಂಬುವನೆ ಉಂಡು ಬೆಳೆವವು ಕೇಳಿರಣ್ಣಾ.
ಕ್ಷೀರಾಬ್ಧಿಯೊಳಗೆ ಹುಟ್ಟಿದ ಪ್ರಾಣಿಗಳೆಲ್ಲ ಕ್ಷೀರವನೆ ಉಂಡು ಬೆಳೆವವು.
ನಿಮಗೆ ಮುಕ್ತಿಯುಂಟಾದಡೆ ಇವು ಮಾಡಿದ ಪಾಪವೇನು ಹೇಳಿರೇ?
ವಿಚಾರಿಸುವಡೆ ನಿಮ್ಮಿಂದ ಅವೆ ಹಿರಿಯರು ನೋಡಾ.
ವಾಗದ್ವೈತವ ನುಡಿದು ಅನುವನರಿಯದೆ ಬರಿ ಸೂರೆವೋದಿರಲ್ಲಾ.
ಆದಿ ಅನಾದಿಯ ಅಂಗವ ಮಾಡಿ,
ಆ ಮಹಾ ಅನಾದಿಯ ಪ್ರಕಾಶವನೆ
ಶ್ರೀಗುರು ಸಾಕಾರಮೂರ್ತಿಯಂ ಮಾಡಿ,
ಅಂಗ ಮನ ಪ್ರಾಣ ಸರ್ವಾಂಗದಲ್ಲಿ ನೆಲೆಗೊಳಿಸಿದ ಭೇದವನರಿತು,
ಶ್ರೋತ್ರ ನೇತ್ರ ಘ್ರಾಣ ತ್ವಕ್ಕು ಜಿಹ್ವೆ
ಮೊದಲಾದ ಸರ್ವೇಂದ್ರಿಯದಲ್ಲಿ ವೇಧಿಸಿಕೊಂಡು,
ಶುದ್ಧ ಸುಯಿದಾನ ಸುಜ್ಞಾನದಿಂದ ಲಿಂಗಾವಧಾನ ಹಿಡಿದು ಅರ್ಪಿಸಿ,
ಆ ಪರಮ ಪ್ರಸಾದವನುಂಡು,
ಮಾತಂಗ ನುಂಗಿದ ನಾರಿವಾಳದ ಫಲದಂತೆ
ಬಯಲುಂಡ ಪರಿಮಳದಂತೆ

**ನಿಜಗುರು ಭೋಗಸಂಗನೊಳು ಸಯವಾದ ಶರಣರಿರವು,**
**ಮಿಕ್ಕಿನ ಭವಭಾರಿಗಳಿಗೆಂತು ಸಾಧ್ಯವಪ್ಪುದೊ, ಕೇಳಯ್ಯಾ.**
**ಹಾವಿನಹಾಳ ಕಲ್ಲಯ್ಯ**

ಕಲ್ಲಯ್ಯನ ಜನ್ಮಸ್ಥಳವಾದ ಹಾವಿನಹಾಳದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಬಹುತೇಕ ಸಂಶೋಧಕರು ಇಂದಿನ ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಹಾವಿನಹಾಳ ಗ್ರಾಮ ಎಂದು ಅಭಿಪ್ರಾಯಪಡುತ್ತಾರೆ. ಇನ್ನೂ ಕೆಲವರು ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಹಾವಿನಹಾಳ ಗ್ರಾಮ ಎಂದು ಅಭಿಪ್ರಾಯಪಡುತ್ತಾರೆ. ಇವುಗಳಲ್ಲದೆ ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲೂಕಿನಲ್ಲಿ ಹಾವಿನಹಾಳು ಹೆಸರಿನ ಗ್ರಾಮವಿದ್ದು ಕಲ್ಲಯ್ಯ ಇದೇ ಗ್ರಾಮದವನು ಎಂದು ಮತ್ತೆ ಕೆಲವರ ವಾದವಾಗಿದೆ. ಆದರೆ ಕಾಕತಾಳೀಯವೆಂದರೆ ಈ ಮೂರೂ ಗ್ರಾಮಗಳಲ್ಲಿ ಕಲ್ಲಯ್ಯನ ಆರಾಧ್ಯದೈವ ಕಲಿನಾಥ ಅಥವಾ ಕಲ್ಲೇಶ್ವರನ ಪ್ರಾಚೀನ ದೇವಸ್ಥಾನವಿದೆ.

‘‘ಮತ್ತೊಂದು ವಾದದ ಪ್ರಕಾರ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಹಾವಿನಹಾಳ ಕಲ್ಲಯ್ಯನ ಜನ್ಮಸ್ಥಳವೆಂದು ವಿದ್ವಾಂಸರಾದ ಡಾ. ಲಿಂಗಣ್ಣ ಗೋನಾಳರು ಅಭಿಪ್ರಾಯಪಡುತ್ತಾರೆ. ಅದಕ್ಕೆ ಅವರು ಕೊಡುವ ಆಧಾರವೆಂದರೆ ಜೇಡರ ದಾಸಿಮಯ್ಯ, ಕೆಂಬಾವಿ ಭೋಗಣ್ಣ, ಶಂಕರ ದಾಸಿಮಯ್ಯ ಮತ್ತು ದುಗ್ಗಳೆ ದಾಸಿಮಯ್ಯ ಹೀಗೆ ಶರಣರ ಒಂದು ಪರಂಪರೆ ಇರುವ ಪರಿಸರದಲ್ಲಿ ಈ ಶರಣ ಹುಟ್ಟಿರುವುದು ಆಶ್ಚರ್ಯದ ಸಂಗತಿಯೇನಲ್ಲ’’ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಅದೇ ರೀತಿ ಡಾ. ಬಿ. ಮಹಾದೇವ ಅವರು ಡಾ. ಲಿಂಗಣ್ಣ ಗೋನಾಳರ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. ಈ ವಿದ್ವಾಂಸರ ಅಭಿಪ್ರಾಯಗಳನ್ನು ಅಲ್ಲಗಳೆಯಲಾಗದಿದ್ದರೂ ಅವರು ಕೊಡುವ ಆಧಾರಗಳು ಅಷ್ಟೊಂದು ಪ್ರಬಲವಾಗಿಲ್ಲ ಎನ್ನಬಹುದು.

ಹಾವಿನಹಾಳ ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಒಂದು ಗ್ರಾಮ. ಇದು ಸುರಪುರದಿಂದ ದಕ್ಷಿಣಕ್ಕೆ 4 ಕಿ.ಮೀ. ದೂರದಲ್ಲಿದೆ. ಕಲ್ಲೇಶ್ವರ ದೇವಸ್ಥಾನವು ನೈಋತ್ಯ ದಿಕ್ಕಿನ ಒಂದು ಕಿ.ಮೀ. ಅಂತರದಲ್ಲಿದೆ. ಇದು ದೇವಪುರ ಅಡ್ಡರಸ್ತೆಯಿಂದ ವಿಜಯಪುರಕ್ಕೆ ಹೋಗುವ ರಸ್ತೆಯ ಹತ್ತಿರದಲ್ಲಿದೆ. ಈ ದೇವಸ್ಥಾನದ ಸುತ್ತಮುತ್ತ ಇರುವ ಕೆಲವು ಅವಶೇಷಗಳಿಂದ ಹಾವಿನಹಾಳ ಗ್ರಾಮ ಇಲ್ಲಿಯೇ ಇತ್ತೆಂದು ತರ್ಕಿಸಲಾಗುತ್ತದೆ. ಕೆಲವು ಕಾರಣಾಂತರಗಳಿಂದ ಜನರು ಸ್ಥಳಾಂತರ ಆಗಿರಬಹುದೆಂದು ಹಿರಿಯರು ಹೇಳುತ್ತಾರೆ. ಈ ಹಾವಿನಹಾಳ ಗ್ರಾಮದಲ್ಲಿ ಅಕ್ಕಸಾಲಿಗರ ಮನೆತನ ಒಂದೆರಡು ಕುಟುಂಬಗಳನ್ನು ಹೊರತುಪಡಿಸಿದರೆ ಮರಾಠಿ ಕುಟುಂಬಗಳ ಸಂಖ್ಯೆ ಅಧಿಕವಾಗಿದೆ. ಸುರಪುರ ಸಂಸ್ಥಾನಕ್ಕೆ ಸೇರಿದ ಈ ಗ್ರಾಮ ಸುರಪುರದ ದೊರೆಗಳು ತಮ್ಮ ಸೈನ್ಯದಲ್ಲಿ ಮರಾಠರನ್ನು ಸೇರಿಸಿಕೊಳ್ಳುತ್ತಿದ್ದುದರಿಂದ ಮತ್ತು ಅವರ ವಾಸ್ತವ್ಯಕ್ಕೆಂದೇ ಹಾವಿನಹಾಳದಲ್ಲಿ ವ್ಯವಸ್ಥೆ ಮಾಡಿದ್ದರು. ಅಂತೆಯೇ ಮರಾಠಿಗರ ಸಂಖ್ಯೆ ಈ ಊರಿನಲ್ಲಿ ಬೆಳೆಯಲು ಕಾರಣವಾಯಿತು. ಈ ಮರಾಠಿಗರ ಪ್ರಭಾವ ಎಷ್ಟಿತ್ತೆಂದರೆ ಬೇರೆ ಕಡೆಯಿಂದ ಹಾವಿನಹಾಳಕ್ಕೆ ಬರುವವರು ಇವರ ಅಪ್ಪಣೆಯನ್ನು ಪಡೆದು ಊರನ್ನು ಪ್ರವೇಶಿಸಬೇಕಾಗಿತ್ತು. ಅದು ಸುರಪುರದ ಬೇಡ ದೊರೆಗಳ ಕಟ್ಟಪ್ಪಣೆಯಾಗಿತ್ತು.

ಈ ಹಾವಿನಹಾಳದಲ್ಲಿಯೂ ಒಂದು ಕಲ್ಲೇಶ್ವರನ ದೇವಸ್ಥಾನವಿದೆ. ಇದು 12ನೆಯ ಶತಮಾನದ ಕಲ್ಯಾಣಿ ಚಾಲುಕ್ಯರ ಕಾಲದ ಪ್ರಾಚೀನ ದೇವಾಲಯವೆನ್ನುವಂತೆ ಸಾಕ್ಷಿಯಾಗಿ ನಿಂತುಕೊಂಡಿದೆ. ಹಾವಿನಹಾಳ ಕಲ್ಲಯ್ಯನ ಆರಾಧ್ಯದೈವ ಹಾಗೂ ವಚನಗಳ ಅಂಕಿತವಿರುವ ಕಲ್ಲೇಶ್ವರನ ದೇವಸ್ಥಾನವು ಹಾವಿನಹಾಳದಲ್ಲಿದೆ. ಈಗ ದೇವಸ್ಥಾನದ ಸುತ್ತಮುತ್ತ ಜನವಸತಿ

ಇಲ್ಲ. ಈ ದೇವಸ್ಥಾನವು 12ನೆಯ ಶತಮಾನದ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಟ್ಟಿಸಿದ ಪ್ರಾಚೀನ ದೇವಸ್ಥಾನ. ಇದರ ಮಹಾದ್ವಾರ ಪೂರ್ವಾಭಿಮುಖವಾಗಿದೆ. ಮಳೆ, ಗಾಳಿ, ಬಿಸಿಲು ಮತ್ತು ಪರಕೀಯರ ದಾಳಿಯಿಂದ ದೇವಸ್ಥಾನವು ಶಿಥಿಲಗೊಂಡಿದೆ. ಆದರೂ ಹಿಂದಿನ ಭವ್ಯತೆಯನ್ನು ಕಳೆದುಕೊಂಡಿಲ್ಲ. ಮುಖಮಂಟಪ, ನವರಂಗ, ಅಂತರಾಳ ಗರ್ಭಗೃಹವನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿರುವ ಲಿಂಗ (ಕಲ್ಲೇಶ್ವರ) ಶುಭ್ರವಾಗಿದೆ. ಇಲ್ಲಿಯ ಕಂಬಗಳು ಚಿತ್ತಾಕರ್ಷಕವಾಗಿವೆ. ದೇವಸ್ಥಾನದ ಲಿಂಗದ ಮುಂದೆ ನಂದಿ ವಿಗ್ರಹವಿದೆ.

**ಕಲ್ಲಯ್ಯನ ವಚನಗಳು**

ಕಲ್ಲಯ್ಯನು ತನ್ನ ಆರಾಧ್ಯ ದೈವವಾದ 'ಮಹಾಲಿಂಗ ಕಲ್ಲೇಶ್ವರಾ' ಅಂಕಿತದಿಂದ 105 ವಚನಗಳನ್ನು ರಚಿಸಿದ್ದಾನೆ. (ಕಲ್ಲಯ್ಯನ ವಚನಗಳು 106 ಎಂದು ಸಂಕೀರ್ಣ ವಚನ ಸಂಪುಟ– 4ರ ಪ್ರಸ್ತಾವನೆಯಲ್ಲಿ ಡಾ. ಬಿ. ಆರ್. ಹಿರೇಮಠರು ಅಭಿಪ್ರಾಯಪಡುತ್ತಾರೆ) ಈತನ ವಚನಗಳು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಬಹು ಭಾವಗರ್ಭಿತ ಹಾಗೂ ವಿಚಾರಪೂರಿತವಾಗಿವೆ. ಎಲ್ಲಾ ವಚನಕಾರರಂತೆ ಕಲ್ಲಯ್ಯನ ವಚನಗಳಲ್ಲಿ ಭಕ್ತಿ, ಶಿವಜ್ಞಾನ, ಧರ್ಮಾಚರಣೆ, ಸಮಾಜ ವಿಡಂಬನೆ ಹೀಗೆ ಹಲವು ವಿಚಾರಗಳು ವ್ಯಕ್ತವಾಗಿವೆ. ಕಲ್ಲಯ್ಯನಿಗೆ ಸಂಸ್ಕೃತದಲ್ಲಿ ಅಪಾರವಾದ ಪಾಂಡಿತ್ಯವಿದ್ದು, ಆ ಜ್ಞಾನವನ್ನು ವಚನಗಳಲ್ಲಿ ಬಳಸಿಕೊಂಡಿರುವುದು ಆತನ ವಚನಗಳಿಂದ ತಿಳಿದುಬರುತ್ತದೆ.

ಕಲ್ಯಾಣದ ಅನುಭವ ಮಂಟಪದಲ್ಲಿ, ಶಿವಶರಣರೆಲ್ಲ ಕೂಡಿಕೊಂಡು ಶಿವಾನುಭವವನ್ನು ಚರ್ಚಿಸುತ್ತಿದ್ದರು. ಅದಕ್ಕೆ ಪ್ರಭುದೇವರೇ ಅಧ್ಯಕ್ಷರು. ಅದರಂತೆ ಸೊನ್ನಲಿಗೆಯಲ್ಲಿ ಒಂದು ಚಿಕ್ಕ ಅನುಭವ ಮಂಟಪ ರೂಪುಗೊಂಡಿತ್ತು. ಅದಕ್ಕೆ ರುದ್ರಮುನಿಗಳೇ ಅಧ್ಯಕ್ಷರೆನ್ನಬಹುದು. ಕಲ್ಯಾಣದ ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನ ಪಾತ್ರವನ್ನು ಸೊನ್ನಲಿಗೆಯ ಅನುಭವ ಮಂಟಪದಲ್ಲಿ ಸಿದ್ಧರಾಮ ಶಿವಯೋಗಿಗಳು ವಹಿಸುತ್ತಿದ್ದರು. ಹಾವಿನಹಾಳ ಕಲ್ಲಯ್ಯನವರು ಒಬ್ಬ ಪ್ರಮುಖ ಸದಸ್ಯರೆನಿಸಿದ್ದರು. ಕೇದಾರ ಗುರುಗಳು ಇನ್ನೊಬ್ಬ ಸದಸ್ಯರು. ಅನುಭವ ಗೋಷ್ಠಿಯಲ್ಲಿ ಹಲವು ಜನ ಶಿವಶರಣೆಯರು ಭಾಗವಹಿಸುತ್ತಿದ್ದಂತೆ ಆ ಅನುಭವ ಗೋಷ್ಠಿಯಲ್ಲಿಯೂ ಒಬ್ಬಿಬ್ಬರು ಶಿವಶರಣೆಯರು ಆಸ್ಥೆಯಿಂದ ಭಾಗವಹಿಸುತ್ತಿದ್ದರೆಂದು ತೋರುತ್ತದೆ.

ಸಿದ್ಧರಾಮ ಶಿವಯೋಗಿಗಳು ಸಾಮ್ಯಯೋಗಿ ಎನಿಸಿದ್ದರು, ಅವರು ಅಗಾಧವಾದ ಸಮತಾಭಾವವನ್ನು ಸಾಧಿಸಿದ್ದರು. ಆ ಮಾತಿಗೆ ಅವರ ವಚನಗಳೇ ಸಾಕ್ಷಿಯಾಗಿವೆ. ಸಾಮ್ಯಯೋಗಿ ಸಿದ್ಧರಾಮನ ಸಮತಾಭಾವವನ್ನು ಬಹಳವಾಗಿ ಮೆಚ್ಚಿಕೊಂಡವರಲ್ಲಿ ಹಾವಿನಹಾಳ ಕಲ್ಲಯ್ಯನೂ ಒಬ್ಬನು. ಆ ಮೆಚ್ಚಿಕೆಯನ್ನು ಅವನು ತನ್ನ ವಚನಗಳಲ್ಲಿ ತೋರ್ಪಡಿಸಿದ್ದಾನೆ. ಮತ್ತು ಸಿದ್ಧರಾಮನು ಕೈಕೊಂಡ ಕರ್ಮ ಯೋಗದಲ್ಲಿ ಸಹಭಾಗಿಯಾಗಿ ಆ ಮೆಚ್ಚಿಕೆಯನ್ನು ಹೆಚ್ಚು ಸ್ಪಷ್ಟಪಡಿಸಿದ್ದಾನೆ.

ಕಲ್ಲಯ್ಯನ ವಚನಗಳಲ್ಲಿ ಜಾತಿ ಪದ್ಧತಿಗಳ ಖಂಡನೆಯನ್ನು ಕಾಣುತ್ತೇವೆ. ಪುರೋಹಿತರ ಅರ್ಥಹೀನ ಆಚಾರ, ಅನ್ಯಾಯ, ಶೋಷಣೆಗಳು ಸಾಮಾನ್ಯ ಜನರಲ್ಲಿ ನೋವನ್ನುಂಟು ಮಾಡಿತ್ತು. ಅಂತಹ ಶೋಷಣೆ ಕಲ್ಲಯ್ಯನ ಮೇಲೂ ನಡೆದಿತ್ತು. ಇಂತಹ ಅಸಮಾನತೆಯನ್ನು ಸಹಿಸದ ಕಲ್ಲಯ್ಯ ಅವುಗಳನ್ನು ನೇರವಾಗಿ ಪ್ರತಿಭಟಿಸಿದ್ದಾನೆ. ತನ್ನ ವಚನಗಳಲ್ಲಿ ವೈದಿಕ ಧರ್ಮದಲ್ಲಿರುವ ಅಸಮಾನತೆ ಮತ್ತು ಜಾತಿಯ ವಿರುದ್ಧ ಖಂಡನೆ ಮಾಡಿದ್ದಾನೆ. ವಿಪ್ರರು ನಾವೇ ಶ್ರೇಷ್ಠರು ಎಂಬ ಅಹಂಕಾರದಿಂದ ನಿಮ್ನ ವರ್ಗದವರು ದೇವಾಲಯ ಪ್ರವೇಶಿಸಿದರೆ

ಅದು ಅಪವಿತ್ರ ಮೈಲಿಗೆ ಎಂಬ ಶೋಷಣೆಗಳು ಮೊದಲಾದವುಗಳು ಶ್ರೀಸಾಮಾನ್ಯರ ಮೇಲೆ ನಡೆಯುತ್ತಿದ್ದ ವರ್ತನೆಯ ವಿರುದ್ಧ ಕಲ್ಲಯ್ಯ ತೀಕ್ಷ್ಣವಾಗಿ ತನ್ನ ವಚನಗಳಲ್ಲಿ ಖಂಡಿಸಿದ್ದಾನೆ.

**"ಹಾಹಾ! ವೇದವೆ ತತ್ವವಾದಡೆ, ಮಾದಾರನ ಮನೆಯಲುಂಡನೊಬ್ಬ**
**ನಿಧಾನವುಳ್ಳ ಉಪಾಧ್ಯಾಯರಾರೂ ಇಲ್ಲದಾದಡೆ**
**ಶಾಸ್ತ್ರವೆ ತತ್ವವಾದಡೆ ಶಿವರಾತ್ರಿಯನೊಬ್ಬ**
**ಬೇಡಂಗಿತ್ತುದನೊಬ್ಬ ಶ್ರೋತ್ರಿಯಂಗೀಯಲಾಗದೆ?**
**ಆಗಮ ವಿಧಿಯಲ್ಲಿ ಮಂತ್ರ ಮೂರುತಿಯೆಂಬ ಮಾತಂತಿರಲಿ**
**ಆದ ಕೇಳಲಾಗದು, ಭ್ರಾಂತು ಬೇಡ**
**ಭಾವಮೂರುತಿ ಬಲ್ಲ ಪ್ರಮಾಣವಿದೆ,**
**ಆ ಕುಲವೆಂದಡೆ ಹೊಕ್ಕ ಕಕ್ಕಯ್ಯಗಳ ಮನೆಯ**
**ಅಕ್ಕಟಾ, ನಿಮ್ಮ ತರ್ಕ ಮುಕ್ಕಾಯಿತ್ತು, ಲೋಕವರಿಯದೇ?**
**ಕಲ್ಲಲಿಟ್ಟು ಕಾಲಲೊದೆದಡೆ, ಅಲ್ಲ ಮೂರುತಿ ನುಡಿಯಿತ್ತಲ್ಲಯ್ಯಾ**
**ಬಲ್ಲದನು ದ್ವಿಜರು ನೀವೆಲ್ಲರೂ ಹೇಳಿರೆ**
**ಸಲ್ಲದು, ನಿಮ್ಮ ವಾದ ನಿಲ್ಲಲಿ, ಬಲ್ಲದ ನಡೆದುದೇ ಬಟ್ಟೆ**
**ಮಹಾಲಿಂಗ ಕಲ್ಲೇಶ್ವರಾ, ಲಿಂಗಾಚಾರಿಗಳು ನೀಮರಯ್ಯಾ"**

'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಹತ್ತನೆಯ ಶತಮಾನದ ಪಂಪನಿಂದ ಹಿಡಿದು 12ನೇ ಶತಮಾನದ ವಚನಕಾರರು, 16ನೇ ಶತಮಾನದ ಹರಿದಾಸರು, 17ನೇ ಶತಮಾನದ ತಿಂಥಣಿ ಮೌನೇಶ್ವರ, 19ನೇ ಶತಮಾನದಲ್ಲಿ ಅದನ್ನು ಸಾದರಪಡಿಸಿದವರು ಸಂತ ಶಿಶುನಾಳ ಶರೀಫರು. ಹೀಗೆ ಎಲ್ಲರೂ ಸರ್ವಧರ್ಮದ ಸಮನ್ವಯವಾಗಿ ಕಂಡಿದ್ದಾರೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ನಾವು ಮತ್ತೆ ಶರಣರ ವಚನಗಳಿಗೆ ಮೊರೆ ಹೋಗುವುದೇ ಒಳ್ಳೆಯದು. ಬಸವಾದಿ ಶರಣರೆಲ್ಲರೂ ಈ ರೀತಿಯ ಮೇಲು ಕೀಳು ಭಾವನೆಯನ್ನು ವೈಜ್ಞಾನಿಕ ಆಧಾರಗಳ ಸಮೇತ ವಿರೋಧಿಸುತ್ತಾರೆ. ಹಾವಿನಹಾಳ ಕಲ್ಲಯ್ಯನು ತನ್ನ ಒಂದು ವಚನದಲ್ಲಿ ಹೀಗೆ ಪ್ರತಿಪಾದಿಸುತ್ತಾನೆ:

**ಬ್ರಾಹ್ಮಣ ಮೊದಲಾಗಿ ಸ್ವಪಚ ಕಡೆಯಾಗಿ**
**ಎಲ್ಲರಿಗೂ ಜನನವೊಂದೆ,**
**ಆಹಾರ ನಿದ್ರೆ, ಭಯ ಮೈಥುನವೊಂದೆ,**
**ಪಾಪ ಪುಣ್ಯವೊಂದೆ, ಸ್ವರ್ಗವೊಂದೆ,**
**ಬೇರೆಂಬ ಭಂಗಿತರೆ ನೀವು ಕೇಳಿರೆ!**
**ಅರಿವೇ ಸತ್ಕುಲ, ಮರವೇ ದುಃಕುಲ**

ಮೇಲ್ಜಾತಿಯವನೆನಿಸಿಕೊಂಡಿರುವ ಬ್ರಾಹ್ಮಣನಾಗಲಿ, ಕೀಳು ಕುಲದವನೆನಿಸಿಕೊಂಡ 'ಸ್ವಪಚ'ನಾಗಲಿ ಎಲ್ಲರ ಜನನವು ಒಂದೇ ರೀತಿಯಿಂದ ಆಗಿರುತ್ತದೆ. ಅವರ ಆಹಾರ, ವಿಹಾರ, ವಿರಾಮ, ಭಾವನೆಗಳು ಒಂದೇ ರೀತಿಯಾಗಿರುತ್ತವೆ. ಅದೇ ರೀತಿ ಅವರ ಧಾರ್ಮಿಕ, ಆಧ್ಯಾತ್ಮಿಕ, ಅಲೌಕಿಕ ನಂಬಿಕೆಗಳಾದ ಪಾಪ-ಪುಣ್ಯ, ಸ್ವರ್ಗ-ನರಕಗಳೂ ಒಂದೇ ಆಗಿರುತ್ತವೆ. ಇವುಗಳನ್ನು ಅರಿತವರು 'ಮೇಲು-ಕೀಳು' ಎಂದು ಭೇದಭಾವ ಮಾಡುವುದಿಲ್ಲ. ಈ ಸತ್ಯವನ್ನು ಅರಿಯದೆ, ತಾರತಮ್ಯ ಮಾಡುವವರನ್ನು ಹಾವಿನಹಾಳ ಕಲ್ಲಯ್ಯನು 'ಬೇರೆಂಬ ಭಂಗಿತರೆ' ಎಂದು ಛೇಡಿಸುತ್ತಾನೆ. ಈ ವಚನದ ಕೊನೆಯ ಸಾಲು ಅತ್ಯಂತ ಅರ್ಥಪೂರ್ಣವಾಗಿದೆ. ಮನುಷ್ಯರೆಲ್ಲರೂ ಒಂದೇ ಎಂಬ ಜ್ಞಾನವೇ 'ಸತ್ಕುಲ'; ಅದರ ಬಗೆಗಿನ ಅಜ್ಞಾನವೇ

'ದುಃಕುಲ'ವೆಂಬ ಮಾತು 'ಉಚ್ಚ-ನೀಚ' ಎಂಬ ಮಾನದಂಡಗಳನ್ನು ಬುಡಮೇಲಾಗಿಸುತ್ತದೆ.

ಆದ್ದರಿಂದ ಮೇಲು ಕೀಳು ಭಾವನೆಯನ್ನು ಬಿಟ್ಟು ದೇವರಿಗೆ 'ಶರಣ'ನಾಗಬೇಕು. ಅಂತಹ ಶರಣರು "ಮಲಗಿದಾಗ ಎದ್ದಾಗ ಕುಳಿತಾಗ ನಿಂತಾಗ ಸದಾಕಾಲವೂ ಮಹಾತ್ಮರು ಆ ಪರಮಾತ್ಮನ ಧ್ಯಾನದಲ್ಲಿಯೇ ಇರುತ್ತಾರೆ" ಅವರಿಂದ ಮಾತ್ರ ಸಮಾಜ ಉದ್ಧಾರ ಸಾಧ್ಯವಾಗುತ್ತದೆ. ಈ ಶರಣರು ತಾವು ಸಜ್ಜನರೆಂದು ಹೇಳಿಕೊಂಡು ಓಡಾಡುವ ಬಾಯಿಬಡುಕರಲ್ಲ. ಅವರು ಎಲ್ಲಿದ್ದರೂ ಅವರ ಸತ್ಕಾರ್ಯಗಳಿಂದಲೇ ಗುರುತಿಸಲ್ಪಡುತ್ತಾರೆ.

**ಅರಳಿದ ಪುಷ್ಪ ಪರಿಮಳಿಸದಿಹುದೆ?**
**ತುಂಬಿದ ಸಾಗರ ನೊರೆತೊರೆಯಾಡದಿಹುದೆ?**
**ಆಕಾಶ ಮುಟ್ಟುವ ದೋಂಟಿಗೋಲವಿಡಿವನೆ?**
**ಪರಮ ಪರಿಣಾಮಿ ಕರ್ಮವತಿಗಳೆಯದಿಹನೆ**
**ಮಹಾಲಿಂಗ ಕಲ್ಲೇಶ್ವರಾ?**

ಸುಂದರವಾಗಿ ಅರಳಿದ ಹೂವು ತನ್ನ ನೋಡುವಂತೆ ರಸಿಕನನ್ನು ಆಹ್ವಾನಿಸದಿದ್ದರೂ ಅದರ ಪರಿಮಳ ಮಾತ್ರದಿಂದ ದುಂಬಿಯು ಅದರ ಇರವನ್ನು ಗುರುತಿಸುತ್ತದೆ. ತುಂಬಿರುವ ಸಾಗರದಲ್ಲಿ ಅಲೆಗಳ ನರ್ತನವು ಸರ್ವೇ ಸಾಮಾನ್ಯ. ಆಕಾಶ ಮುಟ್ಟುವಷ್ಟು ಎತ್ತರವಾಗಿರುವವನು ಎಂದಿಗೂ ಕಿರುಗೋಲಿನ ನೆರವಿಗೆ ಅಂಗಲಾಚುವುದಿಲ್ಲ. ಅದೇ ರೀತಿ ಶರಣನಾದವನು, ಸನ್ಮಾರ್ಗದಲ್ಲಿರುವವನು ಪಾಪಕರ್ಮಗಳಿಂದ ಬಹುದೂರದಲ್ಲಿರುತ್ತಾನೆ; ದೂರವಿರಬೇಕು ಎಂಬುದು ಕಲ್ಲಯ್ಯನ ಆಶಯವಾಗಿದೆ. ಸಾಮಾಜಿಕ ಕಳಕಳಿಯಿಂದ ಕೂಡಿರುವ ವಚನಗಳು ಕಲ್ಲಯ್ಯನವರ ಸಾಮಾಜಿಕ ತುಡಿತವನ್ನು ವ್ಯಕ್ತಪಡಿಸುತ್ತವೆ. ಅದೇ ಬಸವಣ್ಣನವರ ಜನಪ್ರಿಯ ವಚನ 'ಕಳಬೇಡ, ಕೊಲಬೇಡ'ವನ್ನು ನೆನಪಿಸುವ ಹಾವಿನಹಾಳ ಕಲ್ಲಯ್ಯನ ಈ ವಚನವು ಅದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗುತ್ತದೆ.

**"ತನ್ನ ಗುಣವ ಹೊಗಳಬೇಡ, ಇದಿರ ಗುಣವ ಹಳಿಯಬೇಡ**
**ಕೆಮ್ಮನೊಬ್ಬರ ನುಡಿಯಬೇಡ, ನುಡಿದು ನುಂಪಿತನಾಗಬೇಡ**
**ಇದಿರ ಮುನಿಯಿಸಬೇಡ, ತಾ ಮುನಿಯಬೇಡ**
**ತಾನು ಬದುಕುವೈ ಸುದಿನ ಸಮತೆ ಸಮಾಧಾನ ತುಂಬಿ ತುಳುಕದಿರಬೇಕು**
**ಮಹಾಲಿಂಗ ಕಲ್ಲೇಶ್ವರ ದೇವರ ನಿಚ್ಚಳ ನಿಜವನರಿದಡೆ,**
**ಬಚ್ಚಬರಿಯ ಸಹಜ ಸಮಾಧಾನವಳಪಟ್ಟಿರಬೇಕು"**

ಈ ವಚನದಲ್ಲಿ ಕಲ್ಲಯ್ಯನು ಸಮಾಜದಲ್ಲಿರುವ ವ್ಯಕ್ತಿ ಯಾವ ರೀತಿಯ ನಡತೆ, ವರ್ತನೆಗಳನ್ನು ಹೊಂದಿರಬೇಕೆಂಬ ನೀತಿಯನ್ನು ವಿವರಿಸಿದ್ದಾನೆ. ತನ್ನನ್ನು ತಾನು ಬೇರೆಯವರ ಎದುರಲ್ಲಿ ಹೊಗಳಿಕೊಳ್ಳಬೇಡ, ಮತ್ತೊಬ್ಬರ ಗುಣವನ್ನು ಹಳಿಯಬೇಡ, ನಿಂದಿಸಬೇಡ, ಮುನಿಯಬೇಡ, ತಾನು ಬದುಕುವ ದಿನಗಳಷ್ಟು ಸಮತೆ ಸಮಧಾನವಿರಬೇಕು. ಮಹಾಲಿಂಗ ಕಲ್ಲೇಶ್ವರನಲ್ಲಿ ನಿಚ್ಚಳ ನಿಜವ ಅರಿತು ಸಮಾಧಾನವಿರಬೇಕು. ಆತ್ಮಪ್ರಶಂಸೆ ಇತರರ ನಿಂದನೆ ಬಿಟ್ಟರೆ ಅದೇ ಅಂತರಂಗ ಹಾಗೂ ಬಹಿರಂಗದ ಶುದ್ಧಿ ಎಂದು ಕಲ್ಲಯ್ಯ ಪ್ರತಿಪಾದಿಸುತ್ತಾನೆ.

## ಪರಾಮರ್ಶನ ಗ್ರಂಥಗಳು:


1. ಹಿರೇಮಠ ಬಿ.ಆರ್. (ಸಂ.), (1993), ಸಂಕೀರ್ಣ ವಚನ ಸಂಪುಟ–3, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
2. ವಿದ್ಯಾಶಂಕರ ಎಸ್. (ಸಂ.), (2001), ಸಂಕೀರ್ಣ ವಚನ ಸಂಪುಟ–2 (ದ್ವಿತೀಯ ಪರಿಷ್ಕೃತ ಮುದ್ರಣ), ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
3. ನಾಗಭೂಷಣ ಸಿ., (2000), ಶರಣ ಸಾಹಿತ್ಯ ಸಂಸ್ಕೃತಿ ಕೆಲವು ಅಧ್ಯಯನಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್.
4. ವಿದ್ಯಾಶಂಕರ ಎಸ್., (2013), ವೀರಶೈವ ಸಾಹಿತ್ಯ ಚರಿತ್ರೆ 1, ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ.
5. ನಾಯಕ ಹಾ.ಮಾ. (ಸಂ.), (1977), ಕನ್ನಡ ಅಧ್ಯಯನ ಸಂಸ್ಥೆಯ ಸಾಹಿತ್ಯ ಚರಿತ್ರೆ–4, ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.
6. ಗಿರಡ್ಡಿ ಗೋವಿಂದರಾಜ, (2018), ವಚನ ವಿನ್ಯಾಸ, ಧಾರವಾಡ: ಮನೋಹರ ಗ್ರಂಥಮಾಲಾ.
7. ರಂಜಾನ್ ದರ್ಗಾ, (2013), ಜಾತಿ ವ್ಯವಸ್ಥೆಗೆ ಸವಾಲಾದ ಶರಣರು, ಬಳ್ಳಾರಿ: ಲೋಹಿಯಾ ಪ್ರಕಾಶನ.
8. ಭೂಸನೂರಮಠ ಶಿ. (ಸಂ.), (2006), ವಚನ ಸಾಹಿತ್ಯ ಸಂಗ್ರಹ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
9. ಶಾಂತಲಾ ಎಸ್. ಮುಕ್ಕುಂದಿಮಠ, (2020), ಶರಣ ಹಾವಿನಹಾಳ ಕಲ್ಲಯ್ಯ, ಹುಬ್ಬಳ್ಳಿ: ಶ್ರೀ ವಿಶ್ವಮಠ ಸಾಹಿತ್ಯ ಪ್ರಚಾರ ಸಮಿತಿ.
10. ಶ್ರೀ ಧರೆಪ್ಪ ಅಣ್ಣಪ್ಪ ಶಿರನಾಳ, (2018), ಶರಣ ಹಾವಿನಹಾಳ ಕಲ್ಲಯ್ಯ, ಚಡಚಣ: ರವಿಕಿರಣ ಆಫ್ ಸೆಟ್.